ಸರಗಳ್ಳ ಕಿಸೆಯಿಂದ ತುಂಡಾದ ಒಂದು ಸರ ತೆಗೆದು ನಡುಗುತ್ತ ರಾಯರ ಕೈಗಿತ್ತ.

'ನಮ್ ಏರಿಯಾದ ವಯಸ್ಸಾದ ಮಹಿಳೆಯರ ಸರ ಅಪಹರಿಸಿದ್ರೆ ಸುಮ್ನೆ ಬಿಡ್ತೀನಾ ಸಾರ್ ನಾನು? ಶಂಭು ಸಾರ್ ನಾನು ಶಂಭು... ನಿನ್ನೆ ನಮ್ಮ ಹುಡುಗ್ರು ಹೇಳಿದ್ರು... ಪೊಲೀಸ್ ಸ್ಟೇಶನ್ ಎಲ್ಲ ಸುತ್ತಬೇಡಿ ಸಾರ್... ಏನಾರ ಸಮಸ್ಯೆ ಇದ್ರೆ ಮುಲಾಜಿಲ್ಲದೆ ಡೈರೆಕ್ಟಾಗಿ ಗ್ಯಾರೇಜಿಗೆ ಬಂದು ನನ್ನಲ್ಲಿ ಹೇಳಿ' ಎಂದು ಬೀಗಿ ನುಡಿದ ಶಂಭು, ಆತ ಕರೆದು ತಂದಿದ್ದ ಹುಡುಗನನ್ನು ಎಳೆದುಕೊಂಡೇ ಮೆಟ್ಟಲಿಳಿದು ಹೋದಾಗ ರಾಯರಿಗೆ ಅತ್ಯಾಶ್ಚರ್ಯ! ಹೀಗೂ ಉಂಟೇ!

ಸರವನ್ನು ಸಂತೋಷದಲ್ಲಿ ಓಡಿಬಂದ ಲೀಲಕ್ಕನ ಕೈಗಿತ್ತರು. ಮೊದಲು ಆನಂದಗೊಂಡಿದ್ದ ಲೀಲಕ್ಕ ಮತ್ತೆ ಕಸಿವಿಸಿಗೊಂಡರು. ಸರವನ್ನು ಮತ್ತೆ ಮತ್ತೆ ಪರೀಕ್ಷಿಸುತ್ತಾ, 'ಇದು ನನ್ನದಲ್ಲ... ನನ್ನ ಡಿಸೈನೇ ಬೇರೆ... ಪುನಃ ಯಾರದ್ದೋ ಸರ ಎಗರಿಸಿದವನನ್ನು ಹಿಡಿದು ತಂದು ನಿಮ್ಮೆದುರು ಹೀರೋ ಆಗಿದ್ದಾನೆ... ಶಂಭು ಅಂತೆ ಶಂಭು... ಯಾರದ್ದೋ ಪಾಪ... ಹೊಸದಾಗಿ ಮಾಡಿಸಿದ ಹಾಗಿದೆ... ಅವರ ಶಾಪ ನನಗೆ ಬೇಡ... ಮಾನ ಮರ್ಯಾದೆ ಇಲ್ಲದವರ ಹಾಗೆ ನಾನು ಬೇರೆಯವರು ಕಟ್ಟಿದ ಕರಿಮಣಿ ಸರ ಹಾಕಿಕೊಳ್ಳೋದಾ? ಛೀ... ನನಗೆ ಬೇಡ. ಹೋಗಿ ಅವನ ಮುಖಕ್ಕೇ ಬಿಸಾಡಿ ಬನ್ನಿ' ಅನ್ನುತ್ತ ಕೋಪದಲ್ಲಿ ಸರವನ್ನು ರಾಯರ ಕೈಗೆ ಕುಕ್ಕಿ, 'ನಿಮಗಾದರೋ ಇಷ್ಟು ವರ್ಷ ನನ್ನ ಕುತ್ತಿಗೆಯಲ್ಲಿದ್ದ ಸರ ಯಾವುದು ಅಂತಲೂ ನೆನಪಿಲ್ಲ...' ಎಂದೂ ಅಣಕಿಸಿ ಒಳಗೆ ನಡೆದರು ಲೀಲಕ್ಕ. ರಾಯರು ಗಲಿಬಿಲಿಗೊಂಡರು. ಸರ ಸಿಕ್ಕಿತು ಎಂಬ ಸಂಭ್ರಮದಲ್ಲಿ ಇದ್ದದ್ದು ಐದೇ ನಿಮಿಷ...

ಯಾರದ್ದೋ ಸರ ತಂದು ನೆಮ್ಮದಿಯಿಂದಿದ್ದ ಮನೆಯಲ್ಲಿ ಕೋಲಾಹಲ ತಂದು ಹಾಕಿದ ಘಟಿಂಗ... ಇನ್ನು ಮಡದಿಯನ್ನು ಸಮಾಧಾನಿಸಲು ಎರಡು–ಮೂರು ದಿನ ಹೇಗಾದರೂ ಬೇಕು ಎಂದು ಮನದಲ್ಲೇ ಶಂಭುವನ್ನು ಶಪಿಸುತ್ತಾ ಮನೆಬಾಗಿಲು ತೆರೆದು ಗೇಟಿನ ಬಳಿ ಬಂದರು. ಶಂಭುವಾಗಲೀ ಆತ ಎಳೆದು ತಂದ ಹುಡುಗನಾಗಲೀ ಹತ್ತಿರದಲ್ಲೆಲ್ಲೂ ಕಾಣಿಸಲಿಲ್ಲ. ಇನ್ನೊಂದು ಗೇಟಿನ ಬಳಿ ಹೋಗಿ ನೋಡಿದರು. ಆ ರಸ್ತೆಯ ಕೊನೆಯಲ್ಲಿ ವಿದ್ಯುತ್ ಕಂಬದ ಬಳಿ ಒಂದು ಕೈಯಲ್ಲಿ ಹುಡುಗನ ಕಾಲರ್ ಹಿಡಿದುಕೊಂಡೇ ಮತ್ತೊಂದು ಕೈಯನ್ನು ಬಳಸಿಕೊಂಡು ಶಂಭು ಮೂತ್ರ ಹೊಯ್ಯುತ್ತಿದ್ದ!

## ಗೋಪೀನಾಥ ರಾವ್

ಊರು ದಕ್ಷಿಣ ಕನ್ನಡ ಜಿಲ್ಲೆಯ ಕಟಪಾಡಿ. ತಂದೆ ಹೆಸರಾಂತ ಯಕ್ಷಗಾನ ಅರ್ಥಧಾರಿ ಹಾಗೂ ಕನ್ನಡ ಅಧ್ಯಾಪಕ ದಿವಂಗತ ಮಟ್ಟಿ ಸುಬ್ಬರಾಯರು. ಅಮ್ಮ ಮುತ್ತಮ್ಮ. ವಿದ್ಯಾಭ್ಯಾಸ ಕಟಪಾಡಿ, ಸುರತ್ಕಲ್ ಮತ್ತು ಮಂಗಳೂರಲ್ಲಿ. ವೃತ್ತಿಯಲ್ಲಿ ಚಾರ್ಟರ್ಡ್ ಅಕೌಂಟೆಂಟ್. ಪ್ರಸ್ತುತ ದುಬೈಯಲ್ಲಿ ಉದ್ಯೋಗ. 'ಸಾರ್ವಭೌಮ', 'ಪಾಂ ಪಾಂ ರೈಲು', 'ರಂಗವಲ್ಲಿ ಮನೆ ಎಲ್ಲಿ?' ಎಂಬ ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ.